10. M/s: Beam Global spirits & Wines (i) Pvt. Ltd., Rajasthan

Sl. No.	Liquor Brand Name	ML	V/v
1.	TEACHER'S 50 SCOTCH WHISKY	750,60	42.8%
	TEACHER'S 50 SCOTCH WHISKY (CSD)	750	42.8%
2.	TEACHER'S HIGHLAND CREAM SCOTCH WHISKY	1000,750, 375,60	42.8%
	TEACHER'S HIGHLAND CREAM SCOTCH WHISKY (CSD)	750	42.8%
3.	DYCRARE CRAFTED WHISKY	750,375, 180	42.8%
	DYC RARE CRAFTED WHISKY (CSD)	750	42.8%
4.	TEACHER'S ORIGIN BLENDED SCOTCH WHISKY	750	42.8%

ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಕನ್ನಡ ಶಾಲೆಗಳ ಸ್ಥಾಪನೆ ಬಗ್ಗೆ

287 (656) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗಡಿ ಭಾಗದ ಸುಮಾರು 20 ಗ್ರಾಮಗಳಲ್ಲಿ ಕನ್ನಡ ಶಾಲೆಗಳು ಇಲ್ಲದೇ ಇರುವುದರಿಂದ ಈ ಭಾಗದ ವಿದ್ಯಾರ್ಥಿಗಳು ಶಾಲಾ ಶಿಕ್ಷಣದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮಗಳಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಮುಂದೆ ಇರುವ ಕ್ರಮಗಳೇನು;

ಇ) ಪ್ರಸಕ್ತ ಶೈಕ್ಷಣಿಕ ವರ್ಷಗಳಲ್ಲಿ ಭಾಲ್ಕಿ ತಾಲ್ಲೂಕಿನ ಯಾವ್ಯಾವ ಗ್ರಾಮಗಳಲ್ಲಿ ಹೊಸದಾಗಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಈ ಗ್ರಾಮಗಳಲ್ಲಿ ಮರಾಠಿ ಮಾಧ್ಯಮದ ಶಾಲೆಗಳಿವೆ. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 20 ಕನ್ನಡ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು 2010–11 ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಇ) ಭಾಲ್ಕಿ ತಾಲ್ಲೂಕಿನ ಗಡಿ ಭಾಗದಲ್ಲಿ 20 ಕನ್ನಡ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಗ್ರಾಮಗಳ ವಿವರ ಕೆಳಕಂಡಂತಿದೆ.

1) ಸೋಮಪುರ.
2) ಅತನೂರ.
3) ತಮಗ್ಯಾಳವಾಡಿ
4) ಅಳವಾಯಿ ಬಡಾವಣೆ.
5) ಅರಿವಾಡಿ.
6) ಅಲಸಿತೂಗಾಂ ಬಡಾವಣೆ.
7) ಗುಂಜಗಾಳ.
8) ಭಗವಾನವಾಡಿ.
9) ಜೀರ್ಗ್ಯಾಳ್
10) ವಾಂದ್ರಿ ಥಾಂಡಾ
11) ಬಸವನವಾಡಿ.
12) ನಾರಾದ ಸಂಗಮ
13) ಜಮಖಂಡಿ
14) ನೇಕರ ಥಾಂಡ
15) ಪೋರಮ್
16) ತಳವಾಡ ಬೆಳವಣಿ

17) ಕೊಂಗಳಿ
18) ಜ್ಯೋತಿ ಥಾಂಡಾ
19) ಲದಾ ಬಡಾವಣೆ.
20) ಸಹಿಗಾಂವ್ ಥಾಂಡಾ

ಭಾಲ್ಕಿ ಪಟ್ಟಣದಲ್ಲಿರುವ ಗ್ರಂಥಾಲಯ ಕಟ್ಟಡದ ಬಗ್ಗೆ

288 (657) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿರುವ ಗ್ರಂಥಾಲಯಕ್ಕೆ ಸ್ವಂತ ಕಟ್ಟಡವನ್ನು ಒದಗಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಗ್ರಂಥಾಲಯವು ಎಲ್ಲಿ ಕಾರ್ಯನಿರ್ವಹಿಸುತ್ತಿದೆ;

ಇ) ಈ ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಗ್ರಂಥಾಲಯಕ್ಕೆ ಸ್ವಂತ ಕಟ್ಟಡವನ್ನು ಒದಗಿಸುವ ಬಗ್ಗೆಯಾಗಲಿ ಅಥವಾ ಈಗಿರುವ ಕಟ್ಟಡವನ್ನು ದುರಸ್ಥಿ ಮಾಡುವ ಬಗ್ಗೆಯಾಗಲೀ ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಕೆ. ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಒದಗಿಸಿರುವುದಿಲ್ಲ.

ಆ) ತಹಶೀಲ್ದಾರರ ಅಧೀನದಲ್ಲಿರುವ ಬಾಡಿಗೆ ರಹಿತ ಹಳೆ ಸಬ್‌ರಿಜಿಸ್ಟಾರ್ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇ) ಗಮನಕ್ಕೆ ಬಂದಿದೆ.

ಈ) ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 200x200 ಅಳತೆಯ ನಿವೇಶನಕ್ಕಾಗಿ ತಹಶೀಲ್ದಾರರನ್ನು ಕೋರಲಾಗಿದೆ.